ಓ ಆಯಿಷಾ, ಖಂಡಿತವಾಗಿಯೂ ಅಲ್ಲಾಹು 'ರಫೀಖ್' (ಮೃದು ಸ್ವಭಾವದವನು) ಮತ್ತು ಅವನು 'ರಿಫ್ಖ್' (ಮೃದುತ್ವ) ಅನ್ನು ಇಷ್ಟಪಡುತ್ತಾನೆ. ಅವನು ಮೃದುತ್ವಕ್ಕೆ ನೀಡುವುದನ್ನು ಕಠೋರತೆಗೆ ನೀಡುವುದಿಲ್ಲ, ಮತ್ತು ಅದರ ಹೊರತಾದ ಬೇರೆ ಯಾವುದೇ ವಿಷಯಕ್ಕೂ ನೀಡುವುದಿಲ್ಲ

ಪ್ರವಾದಿಯವರ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಪತ್ನಿ ಸತ್ಯವಿಶ್ವಾಸಿಗಳ ಮಾತೆ ಆಯಿಷಾ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ: ಅವರು ಹೇಳಿದರು: ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ಓ ಆಯಿಷಾ, ಖಂಡಿತವಾಗಿಯೂ ಅಲ್ಲಾಹು 'ರಫೀಖ್' (ಮೃದು ಸ್ವಭಾವದವನು) ಮತ್ತು ಅವನು 'ರಿಫ್ಖ್' (ಮೃದುತ್ವ) ಅನ್ನು ಇಷ್ಟಪಡುತ್ತಾನೆ. ಅವನು ಮೃದುತ್ವಕ್ಕೆ ನೀಡುವುದನ್ನು ಕಠೋರತೆಗೆ ನೀಡುವುದಿಲ್ಲ, ಮತ್ತು
ಅದರ ಹೊರತಾದ ಬೇರೆ ಯಾವುದೇ ವಿಷಯಕ್ಕೂ ನೀಡುವುದಿಲ್ಲ". [صحيح] [رواه مسلم]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಸತ್ಯವಿಶ್ವಾಸಿಗಳ ಮಾತೆ ಆಯಿಷಾ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಗೆ ಮೃದುತ್ವವನ್ನು ಪಾಲಿಸಲು ಪ್ರೇರೇಪಿಸಿದರು ಮತ್ತು ಅಲ್ಲಾಹು 'ರಫೀಖ್' ಆಗಿದ್ದಾನೆಂದು ತಿಳಿಸಿದರು. ಅಂದರೆ, ತನ್ನ ದಾಸರೊಂದಿಗೆ ದಯೆ ತೋರುವವನು, ಅವರಿಗೆ ಸುಲಭವನ್ನು ಬಯಸುವವನು ಮತ್ತು ಅವರಿಗೆ ಕಷ್ಟವನ್ನು ಬಯಸದವನು. ಆದ್ದರಿಂದ ಅವನು ಅವರಿಗೆ ಅವರ ಸಾಮರ್ಥ್ಯಕ್ಕಿಂತ ಹೆಚ್ಚು ಹೊರೆ ಹೊರಿಸುವುದಿಲ್ಲ. ತನ್ನ ದಾಸನು ಮೃದು ಸ್ವಭಾವದವನಾಗಿರುವುದನ್ನು ಮತ್ತು ಸುಲಭವಾದ ಮಾರ್ಗವನ್ನು ಹಿಡಿಯುವುದನ್ನು ಅವನು ಇಷ್ಟಪಡುತ್ತಾನೆ. ಕಠೋರನಾಗಿರುವುದನ್ನು ಅಥವಾ ಒರಟನಾಗಿರುವುದನ್ನು (ಇಷ್ಟಪಡುವುದಿಲ್ಲ). ಅಲ್ಲಾಹು ಮೃದುತ್ವ ಮತ್ತು ಸೌಮ್ಯತೆಗೆ ಈ ಪ್ರಪಂಚದಲ್ಲಿ ಉತ್ತಮ ಹೊಗಳಿಕೆ, ಗುರಿಗಳ ಸಾಧನೆ ಮತ್ತು ಉದ್ದೇಶಗಳ ಸುಲಭೀಕರಣವನ್ನು ನೀಡುತ್ತಾನೆ, ಮತ್ತು ಪರಲೋಕದಲ್ಲಿ ಮಹಾನ್ ಪ್ರತಿಫಲವನ್ನು ನೀಡುತ್ತಾನೆ. ಇದು ಅವನು ಕಠೋರತೆ, ತೀವ್ರತೆ ಮತ್ತು ಒರಟುತನಕ್ಕೆ ನೀಡುವುದಕ್ಕಿಂತ ಹೆಚ್ಚಾಗಿದೆ. ಮೃದುತ್ವವು ಇತರ ಯಾವುದೇ ಗುಣದಿಂದ ದೊರೆಯದು (ಒಳಿತನ್ನು) ತರುತ್ತದೆ.

http://www.sunnah.global/hadeeth/kn/show/5797